## ಪೋಷಕರು ಏನು ಮಾಡಬೇಕು?

**ಶಿವಮಲ್ಲಪ್ಪ**
ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ಯಶಸ್ ಅವರ ತಂದೆ

ಮಕ್ಕಳಿಗೆ ಮನೆಯಲ್ಲಿ ಓದುವ ವಾತಾವರಣ ರೂಪಿಸಿಕೊಡುವುದು ಪೋಷಕರ ಕರ್ತವ್ಯ. ಅಂಥ ವಾತಾವರಣವೇ ಮಕ್ಕಳನ್ನು ಇನ್ನಷ್ಟು ಓದಿನೆಡೆಗೆ ಕರೆದೊಯ್ಯುತ್ತದೆ. 'ಒಳ್ಳೆಯ ಅಂಕಗಳನ್ನು ಪಡೆದರೆ ಮುಂದೆ ಏನೆಲ್ಲಾ ಓದಬಹುದು' ಎಂಬ ಬಗ್ಗೆ ಹೇಳುತ್ತಿದ್ದರೆ, ಅವರಲ್ಲಿಯೇ ಓದುವ ಉತ್ಸಾಹ ಚಿಗುರೊಡೆಯುತ್ತದೆ. ಇನ್ನು ಪರೀಕ್ಷೆಯ ದಿನಗಳಲ್ಲಿ ಅವರೊಂದಿಗೆ ಹೆಚ್ಚು ಸಮಯ ಕಳೆದರೆ ಸಾಕು.

**ಪ್ರಥಮ ರ್‍ಯಾಂಕ್ ವಿದ್ಯಾರ್ಥಿಯ ತಂದೆ ಹೇಳಿದ್ದು...**

ಪರೀಕ್ಷಾ ಕೇಂದ್ರ ಬೇರೆ ಶಾಲೆಯಲ್ಲಿರುತ್ತದೆ ಎಂದು ಕೆಲವು ಪೋಷಕರೇ ಭಯಪಟ್ಟು ಮಕ್ಕಳಿಗೂ ಹೆದರಿಸುತ್ತಾರೆ. ಬದಲಿಗೆ 'ಎಲ್ಲ ತರಗತಿಗಳ ಪರೀಕ್ಷೆಯಂತೆಯೇ ಇದೂ' ಎಂದು ಹೇಳಿ ಅವರ ಮನಸ್ಸನ್ನು ತಿಳಿಗೊಳಿಸಬೇಕು.

ಬೆಳಿಗ್ಗೆ 4 ಗಂಟೆಗೆ ಎದ್ದು ಓದಬೇಕು ಎಂದು ಒತ್ತಾಯ ಮಾಡುವ ಪೋಷಕರು ಇದ್ದಾರೆ. ಕೆಲ ಮಕ್ಕಳಿಗೆ ಬೆಳಿಗ್ಗೆ ಓದುವುದು ಸರಿಹೊಂದುತ್ತದೆ, ಇನ್ನು ಕೆಲವರಿಗೆ ರಾತ್ರಿ ಓದುವುದು ಅಭ್ಯಾಸವಿರುತ್ತದೆ. ಅವರಿಗೆ ಹೇಗೆ ಅನುಕೂಲವೊ ಹಾಗೆಯೇ ಓದಲು ಬಿಡಿ. ಒತ್ತಾಯ ಮಾಡಿದರೆ ಓದಿನ ಬಗ್ಗೆ ಆಸಕ್ತಿಯನ್ನೇ ಕಳೆದುಕೊಳ್ಳಬಹುದು.

## ಮಕ್ಕಳ ಕಡೆ ಗಮನಕೊಡಿ

ಮಗಳು ಹತ್ತನೇ ತರಗತಿಗೆ ಬಂದ ತಕ್ಷಣ ನಾನು ಹೇಳಿದ್ದು ಒಂದೇ ಮಾತು. 'ಈ ಹಂತ ಬಹಳ ಮುಖ್ಯ. ಇಲ್ಲಿ ಉತ್ತಮ ಅಂಕಗಳನ್ನು ಪಡೆದರೆ ಉನ್ನತ ಹಂತದ ಓದಿಗೆ ಅಡಿಪಾಯವಾಗುತ್ತದೆ' ಎಂದಿದ್ದೆ. ಮಕ್ಕಳ ಸ್ವಭಾವ ಅರಿತು, ಯಾವ ರೀತಿ ಹೇಳಿದರೆ ಅವರಿಗೆ ಆಸಕ್ತಿ ಹುಟ್ಟುತ್ತದೆ, ನಾಟುತ್ತದೆ ಎನ್ನುವುದನ್ನು ಪೋಷಕರಾದ ನಾವು ತಿಳಿದುಕೊಳ್ಳಬೇಕು. ಅವರು ಓದುತ್ತಿದ್ದಾರೆಯೇ ಎಂಬ ಬಗ್ಗೆ ಗಮನ ಇಟ್ಟಿರಬೇಕು. ಪೋಷಕರು ತಮ್ಮ ಬಗ್ಗೆ ಯಾವುದೇ ಗಮನ ನೀಡುತ್ತಿಲ್ಲ ಎಂದು ಕೆಲ ಮಕ್ಕಳು ಮಂಕಾಗಿ ಓದಿನ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಾರೆ. ನಮಗೆ ಎಷ್ಟೇ ಒತ್ತಡ ಇದ್ದರೂ ಮಕ್ಕಳು ಓದುವಾಗ ಕೆಲ ಸಮಯ ಅವರೊಂದಿಗೆ ಇರಬೇಕು. ಮಕ್ಕಳು ಕಷ್ಟಪಟ್ಟು ಓದಿದರೂ ಒಮ್ಮೊಮ್ಮೆ ಹೆಚ್ಚು ಅಂಕ ಬರುವುದಿಲ್ಲ. ಆಗ ಅವರನ್ನು ಬೈಯುವುದು ಸರಿಯಲ್ಲ. ಒಬ್ಬೊಬ್ಬರಿಗೆ ಒಂದೊಂದು ರೀತಿ ಬುದ್ಧಿಶಕ್ತಿ ಇರುತ್ತದೆ. ಎಲ್ಲರೂ ಒಂದೇ ರೀತಿ ಇರಲು ಆಗುವುದಿಲ್ಲ. ಮಕ್ಕಳು ಗಳಿಸುವ ಅಂಕಗಳ ಮೇಲೆ ನಮಗೆ ನಿಯಂತ್ರಣ ಇರುವುದಿಲ್ಲ. ಆದರೆ ಅವರು ಓದಲು ಪೂರಕ ವಾತಾವರಣ ರೂಪಿಸಿಕೊಡುವುದು ಮಾತ್ರ ನಮ್ಮ ಕರ್ತವ್ಯ.

**ಪ್ರಥಮ ರ್‍ಯಾಂಕ್ ವಿದ್ಯಾರ್ಥಿನಿಯ ತಾಯಿ ಹೇಳಿದ್ದು...**

-ಆಶಾ,
ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ ಎರಡನೇ ರ್‍ಯಾಂಕ್ ಪಡೆದ ಆದಿತಿ ರಾವ್ ಅವರ ತಾಯಿ

## ಪಾಸಾಗ್ತೀರಿ, ಗಾಬರಿ ಬೇಡ

**ಗೋಪಿನಾಥ್**
ಸ್ಪರ್ಶ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ

ಪರೀಕ್ಷೆಗೆ ಇನ್ನೂ ಒಂದು ತಿಂಗಳು ಇದೆ. ಯಾಕೆ ಗಾಬರಿ ಆಗ್ತೀರಿ? ತರಗತಿಗಳಲ್ಲಿ ಈವರೆಗೂ ಮಾಡಿರುವ ಪಾಠಗಳಿಂದ ವಿಷಯಗಳ ಕುರಿತು ಸ್ವಲ್ಪ ಮಟ್ಟಿಗಾದರೂ ತಿಳಿವಳಿಕೆ ಇದ್ದೇ ಇರುತ್ತೆ. ನೋಟ್ಸ್ ಮೇಲೆ ಕಣ್ಣಾಡಿಸಿ ಎಲ್ಲಾ ಅರ್ಥವಾಗುತ್ತೆ. ಇನ್ನೊಂದು ತಿಂಗಳು ಹೇಗೆ ಕಳೆಯಬೇಕು ಅಂತ ನೀವೇ ಟೈಂಟೇಬಲ್ ಸಿದ್ಧಪಡಿಸಿಕೊಳ್ಳಿ.

ಒಂದು ದಿನಕ್ಕೆ ಕನಿಷ್ಠ 4 ಪಾಠ ಓದಲೇಬೇಕು. ಒಂದು ಪಾಠವನ್ನು ಪೂರ್ತಿ ಓದಿದ ಮೇಲೆ ಸಂಭನೀಯ ಪ್ರಶ್ನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತೊಮ್ಮೆ ಅಭ್ಯಾಸ ಮಾಡಿ. ಕಣ್ಮುಚ್ಚಿ ಓದಿದ ಪಾಠದ ಮುಖ್ಯಾಂಶಗಳನ್ನು ನೆನಪಿಸಿಕೊಳ್ಳಿ (ರಿಕಾಲ್). ರಾತ್ರಿ ಮಲಗುವ ಮುನ್ನ ಇಂದು ಓದಿದ ಪಾಠಗಳನ್ನು ನೆನಪಿಸಿಕೊಳ್ಳಿ. ಇದರಿಂದ ವಿಷಯ ಮತ್ತಷ್ಟು ಸ್ಪಷ್ಟವಾಗುತ್ತೆ, ಮುಂಜಾನೆ ಹೊಸ ಪಾಠಗಳನ್ನು ಓದಲು ಆರಂಭಿಸುವ ಮೊದಲು ಹಿಂದಿನ ಪಾಠಗಳನ್ನು ತಿರುವಿಹಾಕಿ.

ಡಯಾಬಿಟೀಸ್?

ದಿನಕ್ಕೆ ಎರಡು ಕಪ್
ಅರೆಕಾ ಟೀ
ಜೀವನದ ಗತಿಯನ್ನು ಬದಲಿಸಬಲ್ಲದು

ಅರೆಕಾ ಟೀಯನ್ನು ಆನಂದಿಸಿ!

ಈಗ 10 ಮತ್ತು 30ರ ಪ್ಯಾಕ್‌ನಲ್ಲಿ ಲಭ್ಯ

FIRST TIME IN WORLD ARECA TEA | INNOVATIVE PRODUCT OF THE YEAR 2015 MAKE IN INDIA EXCELLENCE AWARD | ENTREPRENEURIAL INNOVATION 2017 | BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮೆಡೀಸ್
ಉಡುಪಿ: +91 820 2529023
ಬೆಂಗಳೂರು: +91 9449061161 / +91 80 26726337
ಇ ಮೇಲ್: green_remedies_health@yahoo.in

ಆನ್‌ಲೈನ್ ನಲ್ಲಿ ಖರೀದಿಸಿ
amazon | big basket | Flipkart

ಈಗ www.arecatea.in ನಲ್ಲಿ ಲಭ್ಯ